ದಾವೆ-46/2016 ಪಿಡಬ್ಲೂ-1

ದಿನಾಂಕ : 02-08-2019 ರಂದು ಸಾಕ್ಷಿದಾರನನ್ನು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.

ಪಾಟಿ ಸವಾಲು : ಪ್ರತಿವಾದಿ 1 ಪರ ವಕೀಲರಿಂದ

ನನ್ನ ತಂದೆಯ ತಂದೆಯ ತಂದೆ ಹೆಸರು ತಿಮ್ಮಯ್ಯ ಇರುತ್ತದೆ. ಅವರಿಗೆ 3 ಜನ ಮಕ್ಕಳು ಎಂದರೆ ಸರಿ. ಅವರ ಹಿರಿಯ ಮಗನ ಹೆಸರು ಟಿ.ಹನುಮಂತ, ಟಿ.ಜಂಬಯ್ಯ, ಟಿ.ಜೋಶ್ವ ಇರುತ್ತದೆ ಎಂದರೆ ಸರಿ. ಟಿ.ಹನುಮಂತ ನನ್ನ ತಂದೆಯ ತಂದೆ ಎಂದರೆ ಸರಿ. ಟಿ.ಹನುಮಂತನಿಗೆ 2 ಗಂಡು ಮಕ್ಕಳು 3 ಹೆಣ್ಣು ಮಕ್ಕಳು ಎಂದರೆ ಸಾಕ್ಷಿ ನನಗೆ ಗಂಡು ಮಕ್ಕಳು ಗೊತ್ತು ಹೆಣ್ಣು ಮಕ್ಕಳು ಗೊತ್ತಿಲ್ಲ ಎಂದು ಹೇಳುತ್ತಾರೆ. ಅವರ ಹಿರಿಯ ಮಗಳ ಹೆಸರು ಹೆಚ.ಲಕ್ಷ್ಮಮ್ಮ, ಅಮರಮ್ಮ ಮತ್ತು ಚಿಮ್ಮಕ್ಕ.ಹೆಚ್ ಎಂದರೆ ನನಗೆ ಗೊತ್ತಿಲ್ಲ. ಅವರು ಇರುತ್ತಾರೆ ಅಂತ ಗೊತ್ತಿದ್ದರು ಸಹ ಗೊತ್ತಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಆದ ನಂತರ ಸ್ಯಾಮುಸನ್.ಹೆಚ್ ಎಂದರೆ ಸರಿ. ಸದರಿ ಸ್ಯಾಮುಸನ್.ಹೆಚ್ ನನ್ನ ತಂದೆ ಎಂದರೆ ಸರಿ. ನನ್ನ ತಂದೆಗೆ 3 ಜನ ಮಕ್ಕಳು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ನಾನು ಒಬ್ಬನೇ ಮಗ ಇರುತ್ತೇನೆ ಎಂದು ಹೇಳುತ್ತಾರೆ. ನನ್ನ ತಂದೆಗೆ ಬೆಬಿ.ಎಸ್, ಚಿಕ್ಕ.ಎಸ್ ಎಂದರೆ ಸರಿಯಲ್ಲ. ನಾನು 3ನೇ ದವನಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ 3 ಜನ ಮಕ್ಕಳು ಇದ್ದರು ಸಹ ನಾನು ಒಬ್ಬನೇ ಇರುತ್ತೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತನಾದ ಟಿ.ಹನುಮಂತನಿಗೆ ಡ್ಯಾನಿಯಲ್ ಎಂಬ ಮಗ ಇರುತ್ತಾನೆ ಎಂದರೆ ಸರಿ.

ಜಂಬಯ್ಯನಿಗೆ 6 ಜನ ಮಕ್ಕಳು ಇರುತ್ತಾರೆ ಎಂದರೆ ಸರಿಯಲ್ಲ, ಅವರುಗಳು ಜೆ.ಡೇವಿಡ್, ಮರಿಯಮ್ಮ, ಜಾನ್.ಜೆ, ಯೇಸುದಾಸ.ಜೆ. ಕಮಲಮ್ಮ.ಜೆ, ಜಾನ್ ವೆಸ್ಲಿ.ಜೆ ಎಂದರೆ ಸರಿಯಲ್ಲ. ಇವರಲ್ಲಿ ಕಮಲಮ್ಮ.ಜೆ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಮಲಮ್ಮ.ಜೆ ಇವರಿಗೆ 4 ಜನ ಮಕ್ಕಳು ಅವರುಗಳು ಚಿಕ್ಕ ಪ್ರಮೋದ, ಪ್ರವೀಣಕುಮಾರ, ಪ್ರಶಾಂತ ಕುಮಾರ ಮತ್ತು ಉಶ ಪ್ರಮಿಳ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮರಿಯಮ್ಮ.ಜೆ ಇವರು ಸಹ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರಿಗೆ 8 ಜನ ಮಕ್ಕಳು ಅವರುಗಳು, ಸದಾನಂದ, ಸಾರ, ಜ್ಯೋತಿ, ಕೃಪಾನಂಥ ದಯಾನಂದ, ಸತ್ಯನಂಥ ಭಾಸ್ಕರ ಮತ್ತು ಮರ್ಸಿ ಎಂದರೆ ಸರಿಯಲ್ಲ.

ಟಿ.ಜೋಶ್ವನಿಗೆ 4 ಜನ ಮಕ್ಕಳು ಎಂದರೆ ಸಾಕ್ಷಿ ನನಗೆ ಕೇವಲ 3 ಜನ ಮಕ್ಕಳು ಗೊತ್ತು ಎಂದು ಹೇಳುತ್ತಾರೆ. ಅವರುಗಳು ಪ್ರತಿವಾದಿ 2 ರಿಂದ 4 ಗೊತ್ತು. ಇನ್ನೊಬ್ಬರು ಸರೋಜ.ಜೆ ಇರುತ್ತಾಳೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ನಮ್ಮ ಮನೆತನದ ವಂಶಾವಳಿಯನ್ನು ಸಲ್ಲಿಸಿರುವುದಿಲ್ಲ. ನಾನು

ನನ್ನ ಆಧಾರ ಮತ್ತು ಪಡಿತರ ಚೀಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನನಗೆ ನನ್ನ ಕುಟುಂಬದ ವಿವರಗಳು ನನಗೆ ಗೊತ್ತಿಲ್ಲ ಮತ್ತು ನಾನು ಸದರಿ ಕುಟುಂಬಕ್ಕೆ ಸೇರಿದವನು ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ದಾವ ಜಮೀನು ಒಟ್ಟು ವಿಸ್ತೀರ್ಣ 18 ಎಕರೆ 36 ಗುಂಟೆ ಇರುತ್ತದೆ. ಅದು ಯಾರ ಹೆಸರಿಗೆ ಇತ್ತು ಎಂದರೆ ಸಾಕ್ಷಿ ನನ್ನ ಮುತ್ತಾನಾದ ತಿಮ್ಮಯ್ಯನ ಅವರ ಹೆಸರಿನಲ್ಲಿ ಇತ್ತು ಎಂದು ಹೇಳುತ್ತಾರೆ. ನಾನು ಅವರ ಹೆಸರಿನಲ್ಲಿ ಇದ್ದ ಪಹಣಿಗಳನ್ನು ಸಲ್ಲಿಸಿರುತ್ತೇನೆ. ನನಗೆ ಓದಲು ಬರೆಯಲು ಬರುತ್ತದೆ. ನನಗೆ 38 ವರ್ಷ ವಯಸ್ಸು ಇರುತ್ತದೆ. ನಾನು ನನ್ನ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುತ್ತವೆ. ದಾವ ಆಸ್ತಿ 1954-55 ರಲ್ಲಿ ಜಂಬ ತಂದೆ ತಿಮ್ಮಯ್ಯ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ದಾವ ಆಸ್ತಿ ಮೊದಲಿನಿಂದ ಜಂಬ ತಂದ ತಿಮ್ಮಯ್ಯ ಹೆಸರಿಗೆ ಇದ್ದು ತಿಮ್ಮಪ್ಪ ಮಾದ್ಲಗ ಹೆಸರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಕಾಲವಕಾಶವನ್ನು ಕೋರಿರುತ್ತಾರೆ ಕಾಲವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಯಚೂರ